International Journal of Kannada Research
www.kannadajournal.com

**ISSN: 2454–5813**
IJKR 2019; 5(1): 153-156
© 2019 IJKR
www.kannadajournal.com
Received: 08-11-2018
Accepted: 12-12-2018

**Lokesh Shrichandkar**
Research Scholar, Department of Kannada Gulbarga University Gulbaraga, Karnataka, India

**Correspondence**
**Lokesh Shrichandkar**
Research Scholar, Department of Kannada Gulbarga University Gulbaraga, Karnataka, India

# ಚುಟುಕು ಸಾಹಿತ್ಯಕ್ಕೆ ಎ.ಜೆ ರತ್ನಕಾಳೇಗೌಡರ ಕೊಡುಗೆ

**Lokesh Shrichandkar**

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಬೆರಳೆಣಿಕೆಯ ಸೃಜನಶೀಲ ಲೇಖಕಿ ಎ.ಜೆ. ರತ್ನಕಾಳೇಗೌಡರು ಒಬ್ಬರು. ಈ ನಾಡು ಕಂಡ ಅಪರೂಪದ ಚಿಂತಕಿ ಕವಯತ್ರಿ, ಕತೆಗಾರ್ತಿ ಕಾದಂಬರಿಗಾರ್ತಿ, ಮಕ್ಕಳ ಸಾಹಿತಿ, ಜೀವನಚರಿತ್ರೆ, ಸಂಪಾದನೆ, ನಾಟಕ, ಆಧುನಿಕ ವಚನ ಹೀಗೆ ಸಾಹಿತ್ಯದ ಹಲವು ಪ್ರಕಾರದಲ್ಲಿ ಕೃತಿ ರಚಿಸುತ್ತಲೇ 42 ಕೃತಿ ಹೊರತಂದಿಟ್ಟ ಸೃರ್ಜನಶೀಲ ಸಾಹಿತಿ. ಅದರಂತೆ ಹನಿಗವನ, ಚುಟುಕುಗಳೆಂದು, ಸಣ್ಣ ಪದ್ಯಗಳೆಂದು, ಪ್ರಸಿದ್ದಿ ಹೊಂದಿದ ಪ್ರಕಾರದಲ್ಲಿ ಕೃತಿಗೈದಿದ್ದಾರೆ. ಅವರ ಒಟ್ಟು ಬರಹವೇ ಮಾನವೀಯ ಮೌಲ್ಯದ ಕಡೆ ಮುಖ ಮಾಡಿವೆ. ಚುಟುಕನ್ನು ದಿನಕರ ದೇಸಾಯಿಯಿಂದ ಹಿಡಿದು ಚಂಪಾ ಸಿ.ಪಿ.ಕೆ, ಎಚ್. ದುಂಡಿರಾಜ್, ಬಿ.ಆರ್. ಲಕ್ಷ್ಮಣರಾವ್, ಪಂಚಾಕ್ಷರಿ ಹಿರೇಮಠ, ದೊಡ್ಡರಂಗೇಗೌಡ ಮುಂತಾದವರು ಸಾಹಿತ್ಯ ರಚಿಸಿ. ಚುಟುಕು ಎಂಬುದೊಂದು ಸಾಹಿತ್ಯ ಪ್ರಕಾರ ಎಂದು ಪ್ರಸಿದ್ಧಿ ಹೊಂದಿದೆ. ಆ ಚುಟುಕು ಕವಿಗಳ ಸಾಲಿನಲ್ಲಿ ಎ.ಜೆ. ರತ್ನಕಾಳೇಗೌಡರು ಬಹುಪಾಲು ಯಶಸ್ಸು ಸಾಧಿಸಿದ್ದಾರೆ.

ಚುಟುಕು, ಹನಿಗವನ, ಚಿಕ್ಕಪದ್ಯ, ಹುರಿಗಾಲು ಮುಕ್ತಕ ಹೀಗೆ ಹತ್ತಾರು ಹೆಸರುಗಳಿಂದ ಕರೆದಿದ್ದಾರೆ. ಇಡೀ ಚುಟುಕು ಓದುಗನ–ಕೇಳುಗನ ಮನಸ್ಸನ್ನು ಸೂರೆಗೊಳುತ್ತದೆ ಅಷ್ಟೇ ಅಲ್ಲ ಗಟ್ಟಿಯಿಂದ ಸಾಂಸ್ಕೃತಿಕ ಕಾಳಜಿ ಹೊಂದಿದವುಗಳಾಗಿವೆ. ರಾಜಕೀಯ, ಸಾಮಾಜಿಕ ಹಾಗೂ ಪ್ರಚಲಿತ ವಸ್ತು ವಿಷಯಗಳ ಕುರಿತು ಚುಟುಕು ಆಗಿಂದ್ದಾಗೆ ತೀವ್ರ ಪರಿಣಾಮ ಬೀರುವವು. ವ್ಯಂಗ್ಯ, ವಿಡಂಬನೆ ಹಾಸ್ಯ, ನವೀರಾದ ಶೈಲಿ ಓದುಗನಿಗೆ ಕೇಳುಗನಿಗೆ ಖುಷಿಕೊಡುವ ಸಂಗತಿಯಾಗಿದೆ. ಈ ಹಿನ್ನೆಲೆಯಲ್ಲಿ ಎ.ಜೆ. ರತ್ನಾಕಾಳೇಗೌಡರ 'ಮಿಣುಕುದೀಪ' ಚುಟುಕುಗಳ ಸಂಕಲನ ಭರವಸೆ ಹುಟ್ಟಿಸುತ್ತದೆ. ಜೀವನದ ನಾನಾ ಘಟನೆಗಳನ್ನು ದಾಖಲಿಸುವ ಚುಟುಕುಗಳಾಗಿವೆ. ಇವತ್ತಿನ ಆಧುನಿಕ ಜೀವನದಿಂದ ನಾವೆಲ್ಲ ತತ್ತರಿಸಿ ಹೊದಂತೆ ಒಂದು ವಾಸ್ತವ ಪ್ರಜ್ಞೆ ನಮ್ಮೆದುರಿಗಿದೆ. ಆದಾಗ್ಯೂ ಸಹಿತ ನಾವೆಲ್ಲ ಇದ್ಯಾವದಕ್ಕೂ ಲಕ್ಷ ಕೊಡದೇ, ಬದುಕಿನ ವಾಸ್ತವ ಜೀವನಕ್ಕೆ ಚಿಂತನೆಗೆ ಇಡು ಮಾಡುತ್ತವೆ. ಕವಯತ್ರಿ ರತ್ನಕಾಳೇಗೌಡರ ಆಸಕ್ತಿಗಳು ಬಹು ವಿಧವಾಗಿದೆ. ಹಾಗೂ ಅನೇಕ ರಂಗದಲ್ಲಿ ಗುರುತಿಸಿಕೊಂಡಿದ್ದರಿಂದ ಸಹಜವಾಗಿ ಆ ಎಲ್ಲಾ ರಂಗದ ಕುರುಹುಗಳು ಚುಟುಕುಗಳಾಗಿ ಹೊರ ಬಂದಿವೆ. ಕಾಳೇಗೌಡರು ದೊಡ್ಡ ಪದ್ಯ ಕವನಗಳಗಿಂತ ಚಿಕ್ಕ ಹನಿಗವಿತೆಗಳಲ್ಲಿ ತಾತ್ವಿಕ ಚಿಂತನೆ ಹೊಸ ಬೇರು ಹೊಸ ಸುಳಿವು ದೊರಕಲು ಸಾಧ್ಯವಾಗಿವೆ. ಅಂದರೆ ಹನಿಗವಿತೆ ಅದೊಂದು ಕಾಪಾಡಿಕೊಂಡು ಬಂದ ಸೃಜನಶೀಲ ಸಾಹಿತಿಗಳಾಗಿದ್ದಾರೆ.

ಕನ್ನಡ ಕಾವ್ಯಲೋಕದ ಸಂದರ್ಭದಲ್ಲಿ ಅನೇಕ ಹೊಸ ಪ್ರವಾಹಗಳು ಬಂದು ಹೋಗಿವೆ. ಆದರೆ ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಗಟ್ಟಿಯಾಗಿ ಕಾವ್ಯಲೋಕ ಪ್ರವೇಶಿಸಿದವರು ಕಡಿಮೆ ಅಂತಹ ವೇಳೆಯಲ್ಲಿ ಎ.ಜೆ. ರತ್ನಕಾಳೇಗೌಡರ ಪ್ರಮುಖವಾಗಿ ನಮಗೆ ಕಂಡು ಬರುತ್ತಾರೆ. ಕಾವ್ಯಕ್ಷೇತ್ರ ಬಹು ವಿಸ್ತಾರವಾದದ್ದು, ಅದರಲ್ಲಿ ಚುಟುಕುಗಳ ಕ್ಷೇತ್ರಕ್ಕೆ ಪ್ರವೇಶಿಸಿ ಒಂದುನೂರಾ ಐವತ್ತುಮೂರು ಚುಟುಕು ಬರೆದು ದಾಖಲಿಸಿದ್ದಾರೆ. ಈಗ ಅವರ ಚುಟುಕುಗಳ ಸಂಖ್ಯೆ ಐದುನೂರು ದಾಟಿವೆ. ವಾಸ್ತವಿಕ ಹಾಗೂ ಸಮಾಜದಲ್ಲಿ ನೋವು–ನಲಿವು, ದೌರ್ಜನ್ಯ, ಅಸಹಾಯಕತೆ, ತವಕ ತಲ್ಲಣಗಳನ್ನು ಕಾವ್ಯವಾಗಿಸುವ ಕಲೆ ದಕ್ಕಿದೆ. ಹಾಗಾಗಿ ಅವರ ಚುಟುಕುಗಳಲ್ಲಿ ಪ್ರೀತಿ–ಪ್ರೇಮ ವಿರಹ ದಾಂಪತ್ಯದ ಕುರಿತಾಗಿ ಹೇಳುತ್ತಾರೆ. ಕೇವಲ ಬಂಡಾಯ ಮನೋಧರ್ಮ ಒಂದೇ ಅಲ್ಲ. ಅಲ್ಲಿ ಪ್ರಕೃತಿ–ನಿಸರ್ಗ–ರಮ್ಯತೆಗಳು ಅವರ ಮನಸ್ಸು ವಾಲಿದೆ. ಈ ಕಾರಣಕ್ಕಾಗಿ ಅವರ ಭವ್ಯ ಚುಟುಕುಗಳ ಮಾನವೀಯತೆ ತುಡಿತದ ದೋತಕವಾಗಿದೆ ಎಂದು ಗುರುತಿಸಬಹುದು. "ಎ.ಜೆ. ರತ್ನಾಕಾಳೇಗೌಡರಂತೆ ಬಹು ವಿಶಿಷ್ಠ ಸಂವೇದನಶೀಲ ಸಾಹಿತಿ ಅವರೊಬ್ಬ ಆದರ್ಶ ಗೃಹಿಣಿಯಾಗಿ, ರಾಜಕಾರಣಿಯಾಗಿ, ಶಿಕ್ಷಣ ಪ್ರೇಮಿಯಾಗಿ ಸಾಮಾಜಿಕ ಕಾರ್ಯಕರ್ತೆಯಾಗಿ, ಕನ್ನಡ ನಾಡು ನುಡಿ, ಭಾಷೆ, ಸಂಸ್ಕೃತಿ, ನೆಲ–ಜಲಕ್ಕಾಗಿ ಹೋರಾಡಿದ

ಹೋರಾಟಗಾರತಿ ಇವೆಲ್ಲಕ್ಕಿಂತ ಆದರ್ಶ ಬದುಕು ಕಂಡ ಸಂತೃಪ್ತ ಜೀವನ ಒಂದಾದರೆ, ಅವರ ಬರಹವು ಸಹಿತ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಕೃತಿಗೈದಿರುವದು, ಬದುಕು–ವರಹ ಸಿಲಿಕಾನ ಸೀಟಿ ಬೆಂಗಳೂರದಂತಹ ನಗರ ಪ್ರದೇಶದಲ್ಲಿ ವಾಸಿಸಿದರೂ ದೇಶಿತನ–ಪ್ರೀತಿ–ಅಂತಕರಣ ಕೂಡುವ ಮಾನವೀಯತೆ ಅವರಲ್ಲಿದೆ ಅದೇ ಅವರ ಸಾಹಿತ್ಯದ ತುಡಿತವೇ ಮಾನವೀಯ ಮೌಲ್ಯ ಎತ್ತಿಹಿಡಿಯುವದಾಗಿದೆ" ಎಂದಿದ್ದಾರೆ. ಈ ಮಾತು ಅವರ ಚುಟುಕುಗಳಲ್ಲಿ ಹೆಚ್ಚು ಅನ್ವಯಿಸುತ್ತದೆ. ಅವರ ಚುಟುಕುಗಳು ಮನುಷ್ಯನ ವ್ಯಕ್ತಿತ್ವವನ್ನು ತಿಳಿದುಕೊಳ್ಳಲು ಪ್ರೇರೆಪಿಸುತ್ತವೆ.

ಮನದೊಳಗೆ ಕಾಡಿದ ಹತ್ತಾರು ಉಚ್ಚಾರಗಳ್ನು ಅತೀ ತೀವ್ರವಾದ ಅನುಭವ ಅಭಿವ್ಯಕ್ತಿಗಾಗಿ ಚುಟುಕು ಮಾಧ್ಯಮ ಆರಿಸಿಕೊಂಡಿದ್ದಾರೆ. ತೀವ್ರವಾದ ಪಲ್ಲಟಗಳ ಹಾದಿಯಲ್ಲಿ ಬದುಕು ಸವಲಾಗಿ ಕಂಡಂತ ಬಿಡುವಿರದ ಕೆಲಸದ ಮಧ್ಯಮದಲ್ಲಿ ತನ್ನ ಸಮಯದ ಸಿಕ್ಕಾಗಲೇ ಚುಟುಕುಗಳಿಗೆ ಮೋರೆಹೋದ ಕವಿಯತ್ರಿಯ ಒಟ್ಟು ಆಶಯವೇ ಮನುಷ್ಯಕತ್ವದ ಕಡೆ ಮುಖ ಮಾಡಿರುವುದು ಆಶ್ಚರ್ಯ ಹುಟ್ಟಿಸುತ್ತದೆ. ಮಾನವ ತನ್ನನ್ನು ತಾನು ರಕ್ಷಿಸಿಕೊಳ್ಳಲು ಸ್ವಾರ್ಥಕ್ಕಾಗಿ ಏನೆಲ್ಲಾ ಸಾಧನೆ ಮಾಡುತ್ತಾನೆ 'ನಾನು' ಎಂಬ ಅಹಂಭಾವ ಹೋಗಬೇಕೆಂಬ ಸಂತ, ಬಸವ, ಕನಕರ ದಿವ್ಯರೂಪದಂತಿದ್ದರು. ಕೆಲವೇ ಸಾಲುಗಳಲ್ಲಿ ರತ್ನಕಾಳೇಗೌಡರು ಹೇಳುತ್ತಾ ತನ್ನ ವಿಚಾರಗಳನ್ನು ಅನುಭವಾದ ನೆಲೆಗಳಲ್ಲಿ ಹೇಳುವುದು ಹೀಗೆ ಶಾಂತಿ, ಸಹನೆ, ವಿಜಯದ ಮೆಟ್ಟಿಲು ಧರ್ಪ ದೌರ್ಜನ್ಯ ವಿನಾಶದ ಮೆಟ್ಟಿಲು ಇಲ್ಲಿ ವಿಜಯ–ವಿನಾಶವೆಂಬ ಪದಗಳಿಗೆ ಹೊಸ ವ್ಯಾಖ್ಯಾನ ನೀಡುತ್ತಾರೆ.

'ಮನೆಯೊಳಗೆ ಮನೆಯೊಡೆಯ ಇದ್ದಾನೋ ಇಲ್ಲವೋ' ಎಂದರೇ ಪ್ರಕೃತಿಯನಾಶ ಮಾಡಿ ನಾವೆಲ್ಲ ಇವತ್ತು ಬಂಗಲೆಗಳನ್ನು ಕಟ್ಟುತ್ತಿದ್ದೇವೆ. ಮನುಷ್ಯ ನನ್ನದು ಎಂಬ ಅಹಂಕಾರ ಮೋಹ, ಮದ, ಆಶೆಗಳಲ್ಲಿ ಮೂಳಗಿದ್ದಾನೆ. ಬುದ್ಧ ಆಶೆ ದುಖಃಕ್ಕೆ ಮೂಲವೆಂದು ಅರ್ಥ ಇಲ್ಲಿ 'ಮನೆ' ಹನಿಗವನ ಬಿತ್ತರಿಸುತ್ತಾರೆ.

1. ಮನುಷ್ಯ ಮನೆಯೊಂದನ್ನು ಕಟ್ಟಿ
ತನ್ನದೆಂದು ಬೀಗುತ್ತಿರುವಾಗ ಜಿರಲೆ, ನೋಣ, ಹಲ್ಲಿ,
ಚೇಳ ಇಲಿ ನಗುತ್ತಿದ್ದವು.

1. ಡಾ॥ ಗವಿಸಿದ್ದಪ್ಪ ಎಚ್. ಪಾಟೀಲ – ನಾಕಂಡಂತೆ ಎ.ಜೆ.ರತ್ನಕಾಳೇಗೌಡರ ಸಾಹಿತ್ಯದ ಬೆಳಕಿನ ಬೆಳಕಿನಲ್ಲಿ – ಪುಟ 109 ಕಿಕ್ಕೇರಿ ಪಬ್ಲೀಕೇಷನ ಬೆಂಗಳೂರು 2014.

ನೋಡಲು ಒಂದೊಂದು ಪದ –ಶಬ್ಧ ಪುಟ್ಟ ಪದ್ಯಗಳು ಇಡಿ ವಿಶಾಲ ಅರ್ಥವನ್ನು ತುಂಬಿ ವಿಸ್ತಾರತೆ ಹೊಂದಿವೆ. ಜೀವನವನ್ನು ಅರ್ಥೈಸಿಕೊಳ್ಳಬೇಕು ಅದು ಹೋದರೆ ಎಲ್ಲೂ ಕೂಡ ವ್ಯರ್ಥ ಜೀವಂತ ಶವವಾದ ಬಗ್ಗೆ.

2. ಬರೆಯದವನು ಬರೆಯಲಾರ
ಬೆರೆಯದವನು / ಬದುಕಲಾರ
ಬದುಕಲಾರದವನು / ಅರಿಯಲಾರ
ಬದುಕಿದರೂ / ಜೀವಂತ ಶವ

ಎನ್ನುವಲ್ಲಿ ವಿಷಾದದ ಛಾಯೆ ಎದ್ದು ಕಾಣುತ್ತದೆ. ಮನುಷ್ಯನ ಸ್ವಾರ್ಥಪರವಾದ ವಿಚಾರಗಳು ನಾಶದ ವಿಚಾರಕ್ಕೆ ಕೈಯೊಡ್ಡಿವೆ. ಬೀಜಗಳು ಒಣಗಿಸಿ ಬಿತ್ತಿ ಮಣ್ಣಲ್ಲಿ ತುಳಿದು ಮಳೆಯಲ್ಲಿ ನೆನೆದು ಗೊಬ್ಬರ ಹಾಕಿದರು ಅನ್ನ ನೀಡುವ ಬೀಜಗಳು ತಾನು ನೊಂದೆನೆಂದು ಅದು ತನ್ನ ಸೃಜನಶೀಲತೆಯ ಚಿಂತನೆ.

3. ಬಿಸಿಲಿಗೆ ಒಣಗಿ ಮಳೆಯಲ್ಲಿ ನೆನೆದು
ಮನುಷ್ಯ ಗೊಬ್ಬರ ಹಾಕಿ ಕಾಲಲ್ಲಿ ತುಳಿದರೂ
ಬೇಸರಿಸದೆ ಅನ್ನ ನೀಡಿ ಅವನನ್ನೇ ಸಾಕಿದೆ.

ಎಂದು ಹೇಳುವಲ್ಲಿ ರೈತ–ಮಣ್ಣು–ಬೀಜದ ಸಂಕೇತವನ್ನು ತೋರಿಸುತ್ತದೆ. ನಾಶತನ ಹೊಂದಿದರೂ ಪ್ರಕೃತಿ ನಮಗೆ ಒಳ್ಳೆಯದನ್ನೇ ಮಾಡುತ್ತದೆ ಈ ಮನಸ್ಸು ದೊಡ್ಡದು ಅದಕ್ಕೆ ಕವಿಯತ್ರಿಯ ಭಾವ ಮನುಷ್ಯನು ಕೂಡಾ ದೊಡ್ಡ ಮನಸ್ಸು ಹೊಂದಬೇಕೆಂಬುದಾಗಿದೆ. ರೈತನಿಗೆ ಪುಣ್ಯಕೋಟಿ ಹೇಗೆ ಆಧಾರ ಅದು ಸತ್ಯಕ್ಕೆ ಮತ್ತೊಂದು ಹೆಸರು ತನ್ನ ಮಾತಿಗೆ ತಪ್ಪದೇ ದುಡಿಯುವ ಕಾಯಕದ ಮನಸ್ಸು ಅದಕ್ಕೆ ಇಲ್ಲಿ.

ಎಲ್ಲರಂತಲ್ಲ ನಾನು
ನನ್ನಂತಿಲ್ಲ ಎಲ್ಲರೂ
ನರಬುದ್ಧಿಯವನ ಮುಂದೆ
ನಾನೊಬ್ಬಳು ಪುಣ್ಯಕೋಟಿ

ಧನ ಇಲ್ಲಿ ಮುಗ್ಧ ಪ್ರಾಣಿಯೂ ಹೌದು, ಹೆಣ್ಣು ಕೂಡಾ ಹೌದು, 'ನಗಬುದ್ಧಿ' ಅಲ್ಲ ಪುಣ್ಯಕೋಟಿ ಎಂಬಲ್ಲಿ ಸಾರ್ಥಕತೆ ಕಂಡು ಬರುತ್ತದೆ. ಇವರ ಚುಟುಕಿನಲ್ಲಿ ಹೊಳಪಿದೆ–ಅರ್ಥ–ನೀತಿಯೂ ಇದೆ.

1. ಎ.ಜೆ.ರತ್ನಕಾಳೇಗೌಡರ ಮಿನುಕುದೀಪ ಪುಟ 99
2. ಎ.ಜೆ.ರತ್ನಕಾಳೇಗೌಡರ ಮಿನುಕುದೀಪ ಪುಟ 93
3. ಎ.ಜೆ.ರತ್ನಕಾಳೇಗೌಡರ ಮಿನುಕುದೀಪ ಪುಟ 119.

'ಕತ್ತಲನಭದಲ್ಲಿ ಮಿನುಗುವ ಚುಕ್ಕೆಗಳ ಹಾಗೆ ಇಲ್ಲಿನ ಕವಿತೆಗಳಿವೆ. ಕೆಲವು ಫಳ ಫಳ ಪ್ರಕಾಶಿಸಿದರೆ ಕೆಲವು ಮಸಕಾಗಿ ಕಣ್ಣ ಮಿಟುಕಿಸುತ್ತಲೇ ಬಿಟ್ಟಾರೆ? ಇಲ್ಲಿನ ಕವಿತೆಗಳು ನೂರು ದನಿಯಲ್ಲಿ ಮಾತನಾಡುತ್ತವೆ. ಪ್ರೀತಿಯಿಂದ ಪಿಸುಗುಟ್ಟುತ್ತವೆ. ಸಿಟ್ಟಿನಿಂದ ಗುಟುಗು ಹಾಕುತ್ತವೆ. ವ್ಯಂಗ್ಯದ ದಾಟಿ ಏಟು ನೀಡುತ್ತದೆ. ವಿಷಾದದ ಉಸಿರು ಬಿಡುತ್ತವೆ ಮಣ್ಣಲ್ಲಿ ಮಣ್ಣಾಗಿ ಹೋದವರ ಬಗ್ಗೆ (ಮಣ್ಣಾದವರು), ಈ ಹಾಸಿಗೆ, ಆಧ್ಯಾತ್ಮದ ಚಿಂತನೆ, ದಾನ, ಧರ್ಮ, ಜಾಣ್ಮೆಯನ್ನು ಸಹ ಇಲ್ಲಿ ಕಾಣಬಹುದು.

ಕೇಳಿದ್ದೆಲ್ಲವನ್ನು ಕೊಟ್ರು
ಆಟ ಆಡಿಸುವ / ನೀನು
ನಮಗರಿವಿಲ್ಲದೆಯೇ / ಎಲ್ಲವನು ಕಿತ್ತುಕೊಳ್ಳಿತ್ತಿಯೇ !

ನಮಗೆ ಬೇಡಿದ್ದನ್ನು ಕೊಟ್ಟು ಮತ್ತೆ ಕಸಿದುಕೊಳ್ಳುವ ಬಗೆಯನ್ನು ವಿವರಿಸಿದ್ದು ನೋಡಿದರೆ ನಮಗೆಲ್ಲಾ ಆಶ್ಚರ್ಯ ಹುಟ್ಟಿಸುತ್ತದೆ. ಮಹಿಳಾ ಸಂವೇದನೆಗಳು ಚುಟುಕಿನಲ್ಲಿ ತಂದಿದ್ದಾರೆ. ಹೆಣ್ಣಿನ ಶೋಷಣೆ ಮಹಾಭಾರತದಲ್ಲಿ ನಡೆದಿದೆ ಅದನ್ನು ಕೆಲವ ಸಾಲುಗಳಲ್ಲಿ ಅಭಿವ್ಯಕ್ತಿಸಿದ್ದಾರೆ.

ದುಶ್ಯಾಸನ ಸಭೆಯಲ್ಲಿ ದ್ರೌಪದಿಯ
ಸೀರೆ ಎಳೆದಿದ್ದು / ಪರಾಕ್ರಮವಲ್ಲ
ಅವನತ್ತಿಯ ಪ್ರತೀಕ !

ದುಶ್ಯಾಸನ ರೀತಿಯನ್ನು ಖಂಡಿಸಿದ್ದಾರೆ. ಗುಡಿಸಲುಗಳು ಒಂದು ರೀತಿಯಿಂದ ಬಂಡಾಯದ ಪ್ರತೀಕವಾಗಿವೆ. ಭೂ ಕಂಪಕ್ಕೆ ದಲಿತ

ಕವಿ ಸಿದ್ಧಲಿಂಗಯ್ಯನವರ ಆಶಯಗಳಂತೆ ಪ್ರತೀಭಟಿಸುವ ಗುಣ ಚುಟುಕಿನಲ್ಲಿ ಕಂಡು ಬರುತ್ತದೆ.

ನೆಲಗುಡುಗಿದಾಗ / ಬಹುಮಹಡಿ
ಕಟ್ಟಡಗಳು / ನಿಮಿಷದಲ್ಲಿ
ಉರುಳಿದವು / ಬಡವರ ಗುಡಿಸಲು
ಕೊಂಚವೂ ಅಲುಗದೆ / ನೆಲೆಯಾಗಿ ನಿಂತವು

ಭೂಕಂಪವಾದರೂ ಸಹಿತ ನೆಲ–ಮಾಹಲುಗಳು ಉರುಳಿದರೂ ಅದಕ್ಕೆ ಎದೆಯೊಡ್ಡಿ ನಿಲ್ಲುವ ಗುಡಿಸಲುಗಳು ಜಗತ್ತಿಗೆ ಸಾರುತ್ತವೆ. ಸೃಷ್ಟಿ, ಪ್ರಕೃತಿ, ನಿಸರ್ಗ ನದಿ, ಹಳ್ಳ–ಕೊಳ್ಳಗಳನ್ನು ಸಹಿತ ಕವಿಯತ್ರಿ ದೇಸಿ ನೆಲೆಯನ್ನು ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ಪ್ರೀತಿ ಪ್ರೇಮ ಹೆಣ್ಣನ್ನು ಕುರಿತು ಅನೇಕ ಚುಟುಕುಗಳು ಮಾತನಾಡುತ್ತವೆ. ಇಲ್ಲಿಯ ಪ್ರತಿಯೊಂದು ಚುಟುಕಿಗೂ ನನ್ನದೇ ಆದ ಒಂದೊಂದು ವಸ್ತು–ವಿಷಯಗಳಿವೆ. ಜೀವನದಲ್ಲಿ ಅನೇಕ ಮುಖಗಳನ್ನು ಕಂಡಂತೆ ಅವುಗಳಿಗೆ ಚುಟುಕಿನಲ್ಲಿ ವಿಸ್ತಾರತೆ ಹೇಳಿದ್ದಾರೆ. ಪ್ರತಿಯೊಂದು ಚುಟುಕು ಕುಸುರಿ ಕೆಲಸದಿಂದ ಹದವಾದ ಮಿತವಾದ ನೇರವಾದ ಸ್ಪಷ್ಟವಾದ ಅರ್ಥಪೂರ್ಣವಾದ, ನಿರ್ಭೀತವಾದ, ವಿನೀತ ಭಾವದಿಂದ ಚುಟುಕುಗಳ ಮನಸೂರೆಗೊಳ್ಳುತ್ತವೆ. ಭಾಷೆಯ ಬಳಕೆಯಲ್ಲೂ ಸಾಕಷ್ಟು ಪಳಗಿದ್ದಾರೆ.

1. ಡಾ॥ ಗವಿಸಿದ್ಧಪ್ಪ ಪಾಟೀಲ–ರತ್ನಧವಳ (ಎ.ಜೆ.ರತ್ನಕಾಳೇಗೌಡ ಅಭಿನಂದನ ಗ್ರಂಥ) ಪುಟ – 295 ರಿಂದ 2011.

ಮನುಷ್ಯನ ಜೀವನದ ಅನೇಕ ಹಂತಗಳು ಚುಟುಕಿನಲ್ಲಿ ಅಭಿವ್ಯಕ್ತಿಗೊಂಡಿವೆ. ಚುಟುಕುಗಳು ಪಿರಿದಾದದ್ದು, ಆದರೆ ಹಿರಿದಾದ ಅರ್ಥವನ್ನು ಹೊಂದಿವೆ. ಎ.ಜೆ.ರತ್ನಕಾಳೇಗೌಡರ ಜೀವನ ಸಾಧನೆಗಳಲ್ಲಿ ಆದ ತಾವು ಕಂಡಂತೆ ಘಟನೆಗಳನ್ನೇ ಚುಟುಕಿನಲ್ಲಿ ಅಭಿವ್ಯಕ್ತಿಸಿದ್ದಾರೆ. ತಮ್ಮ ಅನುಭವದ ಹೊಸ ಹೊಸ ವಿಧಾನವನ್ನು ಅನುಸರಿಸಿದ್ದಾರೆ. ಒಂದೊಂದು ತುಣುಕು–ಮಿಣುಕುಗಳಾಗಿ ಬದುಕಿನ ಜ್ಯೋತಿಗಳಾಗಿ ಕಂಡು ಬರುತ್ತವೆ. ಕನ್ನಡ ಚುಟುಕು ಸಾಹಿತ್ಯದಲ್ಲಿ ಭಾಷೆ–ವಸ್ತು–ವಿಷಯ, ವ್ಯಂಗ್ಯ, ವಿಡಂಬನೆ ಚಿಂತನೆಗಳು ಎಲ್ಲವೂ ಎರಕಹೋಯ್ದು ಅಪರೂಪದ ಚುಟುಕುಗಳಾಗಿವೆ ಕನ್ನಡ ಸಾಹಿತ್ಯದಲ್ಲಿ ಚುಟುಕಿಗೆ ಹೊಸ ಆಯಾಮ ನೀಡಿದ ಎ.ಜೆ. ರತ್ನಕಾಳೇಗೌಡರ ಸ್ಥಾನ ಪ್ರಮುಖವಾಗಿದೆ.

**ಆಧಾರ ಗ್ರಂಥಗಳು**

1. ಡಾ. ಗವಿಸಿದ್ಧಪ್ಪ ಎಚ್. ಪಾಟೀಲ – ಸಾಹಿತ್ಯದ ಬೆಳಕಿನಲ್ಲಿ ಕಿಕ್ಕೇರಿ ಪಬ್ಲೀಕೇಷನ್ ಬೆಂಗಳೂರು – 2014.
2. ಡಾ. ಗವಿಸಿದ್ಧಪ್ಪ ಎಚ್. ಪಾಟೀಲ – ರತ್ನಧವಳ ಎ.ಜೆ ರತ್ನಕಾಳೇಗೌಡ ಅಭಿನಂದನಾ ಸಮಿತಿ ಬೆಂಗಳೂರು – 2014.
3. ಎ.ಜೆ. ರತ್ನಕಾಳೇಗೌಡರ – ಮಿಣುಕುದೀಪ (ಚುಟುಕು ಸಂಕಲನ ತತ್ವ ಪ್ರಕಾಶನ ಬೆಂಗಳೂರು – 2008.

**ಸಂಶೋಧನಾ ವಿಷಯ :** ಡಾ. ಎ.ಜೆ. ರತ್ನಕಾಳೇಗೌಡರ ಜೀವನ ಮತ್ತು ಕೃತಿಗಳ ಅಧ್ಯಯನ

**ಸಂಶೋಧನಾ ಮಾರ್ಗದರ್ಶಕರು :** ಡಾ॥ ಶೀಲಾಕುಮಾರಿ ದಾಸ

**ಸಂಶೋಧನಾ ವಿದ್ಯಾರ್ಥಿ :** ಶ್ರೀ ಲೋಕೇಶ ಪಿ. ಶ್ರೀಚಂದಕರ್,

**ಲೇಖನ ವಿಷಯ :** ಚುಟುಕು ಸಾಹಿತ್ಯಕ್ಕೆ ಎ.ಜೆ.ರತ್ನಕಾಳೇಗೌಡರ ಕೊಡುಗೆ

**ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ**
**ಅಧ್ಯಯ 1 :** ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

**ಅಧ್ಯಯ 2 :** ಎ.ಜೆ. ರತ್ನಕಾಳೇಗೌಡರ ಜೀವನ – ಸಾಧನೆ
1. ಜನನ–ಪರಿಸರ–ಶಿಕ್ಷಣ
2. ಕೌಟುಂಬಿಕ ಜೀವನ
3. ಸಾಹಿತ್ಯ–ಕನ್ನಡಪರ–ಸಂಘಟನೆ ಸೇವೆ
4. ರಾಜಕೀಯ ಸೇವೆ
5. ಸಾಮಾಜಿಕ ಸೇವೆ
6. ಶೈಕ್ಷಣಿಕ ಸೇವೆ
7. ಬಂದ ಪ್ರಶಸ್ತಿ ಗೌರವಗಳು.

**ಅಧ್ಯಯ 3 :** ಎ.ಜೆ. ರತ್ನಕಾಳೇಗೌಡರ ಕೃತಿಗಳ ಅಧ್ಯಯ

**1. ಕತೆಗಳು**
- ಸಾಮಾಜಿಕ ಪ್ರಜ್ಞೆ
- ಮಹಿಳಾ ಚಿತ್ರಣ
- ನಗರೀಕರಣ ಜೀವನ
- ಧಾರ್ಮಿಕ ಪ್ರಜ್ಞೆ

**2. ಕಾದಂಬರಿಗಳು**
- ಸಮಾಜದ ಚಿತ್ರಣ
- ಮಹಿಳಾ ಪ್ರಜ್ಞೆ
- ನಗರ ಜೀವನದ ಚಿತ್ರಣ
- ಕೌಟುಂಬಿಕ ಪ್ರಜ್ಞೆ
- ಪ್ರಚಲಿತ ವಿಷಯಗಳ ಚಿಂತನೆ

**3. ಕಾವ್ಯ**
- ಸಮಕಾಲಿನ ಚಿತ್ರಣ
- ವ್ಯಕ್ತಿಗತ ಪದ್ಯಗಳು
- ಸಾಮಾಜಿಕ ಸಂವೇದನೆ
- ಮಹಿಳಾ ಸಂವೇದನೆ
- ಪ್ರಕೃತಿ–ನಿಸರ್ಗ ಚಿತ್ರಣ
- ದೇವರು ಧರ್ಮ–ನಂಬಿಕೆ.

**4. ಹನಿಗವನಗಳು**
- ಆಧುನಿಕ ವಚನ
- ಮಕ್ಕಳ ಸಾಹಿತ್ಯ
- ಸಂಕೀರ್ಣ ಸಾಹಿತ್ಯ
- ಜೀವನ ಚರಿತ್ರೆ
- ಸಂಪಾದನೆ
- ಗದ್ಯ ಬರಹಗಳು.

**ಅಧ್ಯಯ 4 :** ಎ.ಜೆ. ರತ್ನಕಾಳೇಗೌಡರ ಅವರ ವಸ್ತು–ಭಾಷೆ–ಶೈಲಿ ತಂತ್ರಗಳು.

**ಅಧ್ಯಯ 5 :** ಸಮಾರೋಪ

**ಅನುಬಂಧ**

- ಜೀವನ ವಿವರ
- ಕೃತಿಗಳ ಪಟ್ಟಿ.
- ಪ್ರಶಸ್ತಿ–ಗೌರವಗಳು.
- ಭಾವಚಿತ್ರಗಳು.
- ಆಕರ ಗ್ರಂಥಗಳು.